ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದ.

ಆದರೆ ಅಪ್ಪ ಅವನನ್ನು ಬೆತ್ತ ಹಿಡಿದು ಬಾರಿಸಲು ಮುಂದಾದಾಗ ಶಾಲೆಯತ್ತ ನಡೆದಿದ್ದ. ಈಗ ವಾಸನೆ ಬರುತ್ತಾನೆಂದು ಮೇಷ್ಟ್ರು ಮನೆಗೆ ಕಳುಹಿಸಿದರೆ ಹೋಗುವುದೆಲ್ಲಿಗೆ? ಮನೆಗೆ ಹೋದರೆ ಅಪ್ಪ ನಾನು ಸುಳ್ಳು ಹೇಳುತ್ತೇನೆಂದು ಹೇಳಬಹುದು. ಮನೆಗೆ ಹೋಗಿ ಮರಳಿ ಶಾಲೆಗೆ ಬರುವುದು ಆಗದ ಕೆಲಸ. ಬಟ್ಟೆ ಬದಲಿಸುವುದು...ಬೇರೆ ಬಟ್ಟೆ ಇದ್ದರೆ ತಾನೆ! ಇರುವ ಅಂಗಿ, ಚಡ್ಡಿಯನ್ನು ಶನಿವಾರ ಭಾನುವಾರ ರಜಾದಿನಗಳಲ್ಲಿ ಒಗೆದು ಒಣಗಿಸಿ ಮತ್ತೆ ಸೋಮವಾರದಿಂದ ಶುಕ್ರವಾರದವರೆಗೆ ಅದನ್ನೇ ಹಾಕಬೇಕು. ಇವತ್ತು ಇದನ್ನು ಒಗೆದರೆ ನಾಳೆ ಶಾಲೆಗೆ ಹೋಗುವಾಗ ತೊಟ್ಟುಕೊಳ್ಳಲು ಬಟ್ಟೆಯಿಲ್ಲ. ಇವೆಲ್ಲಕ್ಕೂ ಹೆಚ್ಚಾಗಿ ಅಷ್ಟು ಜನ ಗೆಳೆಯರ ಸಮ್ಮುಖದಲ್ಲಿ 'ಮೀನು ತಿಂದ ಗೋಪಾಲ' ಎಂದು ಅವಮಾನವಾಗುವಂತೆ ಮೇಷ್ಟ್ರು ಮಾಡಿದರಲ್ಲ ಎಂಬ ದುಃಖ. ಗೋಪಾಲ ಅಳು ತಡೆಯದೆ ಜೋರಾಗಿ ಅತ್ತರೆ ಯಾರಾದರೂ ಕೇಳಿದರೆ ಏನೆಂದು ಹೇಳುವುದು? ಎಳೆಯ ಮನಸ್ಸು ಸಂಕಟದಿಂದ ನೊಂದಿತು.

ಕೊನೆಗೆ ಗೋಪಾಲ ನಿಧಾನಕ್ಕೆ ಮನೆಯ ದಾರಿ ಹಿಡಿದ. ಗದ್ದೆಯ ಬದುವಿನಲ್ಲಿ ಸಾಗುವಾಗ ಅಲ್ಲಿ ಅಪ್ಪ ದೊಡ್ಡ ಕುಡುಗೋಲು ಹಿಡಿದು ಗದ್ದೆಯಲ್ಲಿ ಸೊಪ್ಪು ತುಂಡರಿಸುತ್ತಿದ್ದರು. ಅಪ್ಪ ಅಲ್ಲಿಂದಲೇ ಜೋರಾಗಿ ಗದರಿದರು.

'ಏನೋ ಶಾಲೆಗೆ ಹೋಗಿಲ್ಲ' ಅಪ್ಪನ ಆ ಧನಿಗೆ ಗೋಪಾಲ ನಡುಗಿದ. ಸೀದಾ ಗೋಪಾಲನ ಬಳಿಗೆ ಧಾವಿಸಿ ಬಂದರು. ಅಳುತ್ತಿರುವ ಗೋಪಾಲ, 'ಮೇಷ್ಟ್ರು ಮನೆಗೆ ಕಳುಹಿಸಿದರು' ಎಂದ.

'ಯಾಕಂತೆ?'

'ನಾನು ವಾಸನೆ ಬರುತ್ತೇನೆಂದು ಲೆಕ್ಕದ ಮೇಷ್ಟ್ರು ಹೇಳಿದರು'

'ಏನು ವಾಸನೆಯಂತೆ?'

'ನಾನು ಮೀನು ತಿಂದಿದ್ದೇನಂತೆ? ಹಾಗಾಗಿ ಮಿಂದು ಬಟ್ಟೆ ಬದಲಿಸಿ ಶಾಲೆಗೆ ಹೋಗುವಂತೆ ಹೇಳಿದ್ದಾರೆ' ಎಂದು ಗೋಪಾಲ ಒಂದೇ ಸಮನೆ ಅಳತೊಡಗಿದ.

ಅಪ್ಪ ದೇವೋಜಿ ರಾಯರ ಸಿಟ್ಟು ನೆತ್ತಿಗೇರಿತು. ಕೆಸರುಗಾಲಿನಲ್ಲಿ ನೇರ ಕುಡುಗೋಲಿನೊಂದಿಗೆ ಶಾಲೆಯತ್ತ ವೇಗವಾಗಿ ಧಾವಿಸಿದರು.

ಗಣಿತ ಮೇಷ್ಟ್ರು ಇತರ ಇಬ್ಬರು ಮೇಷ್ಟ್ರುಗಳೊಂದಿಗೆ ಊಟ ಮುಗಿಸಿ ಶಾಲೆ ಪಕ್ಕದ ಹೋಟೆಲಿಗೆ ಚಹಾ ಕುಡಿಯಲೆಂದು ಬಂದು ಕುಳಿತಿದ್ದರು.

'ಯಾವ ಸೂಳೇಮಗ, ನನ್ನ ಮಗ ಮೀನು ತಿಂದಿದ್ದಾನೆಂದು ಬೊಗಳಿದ್ದು?' ಎಂದು ಜೋರಾಗಿ ಆರ್ಭಟಿಸುತ್ತಲೇ ಶಾಲೆಯತ್ತ ಹೆಜ್ಜೆ ಹಾಕುತ್ತಿದ್ದರು.

ಗೋಪಾಲನ ಅಪ್ಪನ ಧ್ವನಿ ಕೇಳಿಸಿಕೊಂಡ ಗಣಿತ ಮೇಷ್ಟ್ರು ಹೋಟೇಲಿನ ಹಿಂಭಾಗದ ಬಾಗಿಲಿನಿಂದ ಓಡಿ ಶಾಲೆಯ ಕಚೇರಿ ಸೇರಿಕೊಂಡರು.

'ನನ್ನ ಮಗ ಮೀನು ತಿಂದಿದ್ದಾನಂತೆ. ಆ ಮೇಷ್ಟ್ರು ಬೊಗಳಿದ್ದಾನಂತೆ. ಅವನ ಹುಟ್ಟಡಗಿಸಿಬಿಡುತ್ತೇನೆ' ಎಂದು ಕುಡುಗೋಲು ಹಿಡಿದು ಶಾಲೆಯನ್ನು ಪ್ರವೇಶಿಸಲು ಮುಂದಾದರು.

ಅಷ್ಟರಲ್ಲಿ ಹೋಟೆಲಿನಲ್ಲಿದ್ದ ಇತರರು ಹಾಗೂ ಮೇಷ್ಟ್ರುಗಳು ಸೇರಿ ದೇವೋಜಿ ರಾಯರನ್ನು ತಾಳ್ಮೆ ವಹಿಸುವಂತೆ ಮಾಡಿದರಂತೆ. ಮತ್ತೆ ಅವರು ಅಲ್ಲಿಂದ ಮರಳಿದರು.

ಮರುದಿನ ತರಗತಿಗೆ ಬಂದ ಗಣಿತ ಮೇಷ್ಟ್ರು ಗೋಪಾಲನ ತಂದೆ ಕುಡುಗೋಲು ಹಿಡಿದು ಕಡಿಯಲು ಬಂದುದಕ್ಕೆ ಬೈದಾಡಿದರು. ವಿದ್ಯಾರ್ಥಿಗಳು ಮೀನು ತಿಂದು ಶಾಲೆಗೆ ಬರಬಾರದು. ಮೀನು ತಿಂದರೆ ವಿದ್ಯೆ ತಲೆಗೆ ಹತ್ತುವುದಿಲ್ಲ ನಿಮಗೆ ತಿಳಿದಿರಲಿ. ಮೀನು ತಿನ್ನುವುದರಿಂದ ತಿನ್ನದವರಿಗೆ ವಾಸನೆ ಬರುತ್ತದಲ್ಲ! ಎಂದು ಗಣಿತ ಪಾಠಕ್ಕೂ ಮೊದಲು, ಹಿಂದಿನ ದಿನದ ಘಟನೆಗೆ ವಿರಾಮ ಹಾಡಿದರು. ಗೋಪಾಲ ಅಂದು ತರಗತಿಗೆ ಬಂದಿರಲಿಲ್ಲ.

'ಮೀನು ತಿಂದ ಗೋಪಾಲ' ಎಂಬ ಅಪಹಾಸ್ಯಕ್ಕೆ ಈಡಾಗಬಹುದೆಂಬ ಭೀತಿ, ಅವಮಾನಗಳಿಗೆ ಅಂಜಿ ಮತ್ತೆಂದೂ ಗೋಪಾಲ ಶಾಲೆಗೆ ಬರಲಿಲ್ಲ. ●

